

ಗೌರಿ ಅಂತ್ಯಸಂಸ್ಕಾರ– ಅರಣ್ಯ ಇಲಾಖೆಯಿಂದ ಗೌರವ

ಸೇವಂತಿಗೆ ಹಿತ್ತಲಿನಲ್ಲಿ, ಗದ್ದೆಯಲ್ಲಿ, ಅಡಿಕೆ ತೋಟದಲ್ಲಿ ಗೌರಿಯ ಸಕಲ ಪರಿವಾರ ಸಂಚರಿಸುತ್ತಿತ್ತು. ಕಾಡು ಸುತ್ತಾಡುವಾಗ ಎಲ್ಲೇ ಸಿಕ್ಕರೂ ನಿಂತು ಮಾತಾಡಿಸಿ ಹೋಗುವ ಸಲುಗೆ. ಒಮ್ಮೆ ಕಾಡಿನಲ್ಲಿ ಸರಪರ ಸದ್ದಾಯಿತು. ಜಿಂಕೆಗಳಿರಬಹುದೆಂದು ಊಹಿಸಿದೆ, 'ಗೌರಿ' ಎಂದು ದೊಡ್ಡದಾಗಿ ಕೂಗಿದೆ. ಒಂದಲ್ಲ ಎರಡಲ್ಲ, ಹತ್ತು ಹನ್ನೆರಡು ಜಿಂಕೆಗಳು ಒಂದಾದ ನಂತರ ಒಂದರಂತೆ ಗೌರಿಯ ಜೊತೆ ಸಲುಗೆಯಲ್ಲಿ ಎದುರು ನಿಂತವು. ಬದುಕಿನಲ್ಲಿ ಇಂಥ ಭಾಗ್ಯ ಯಾವತ್ತೂ ಸಿಗಲಿಕ್ಕಿಲ್ಲ, ಧನ್ಯನಾಗಿ ಕೈ ಮುಗಿದೆ.

ಚಿಕ್ಕ ಮರಿಯಿದ್ದಾಗ ಬೀದಿ ನಾಯಿಗಳ ದಾಳಿಯಿಂದ ಬಚಾವಾಗಿ ನಮ್ಮೂರ ಅನಂತ ಗೌಡನ ಕೈಸೇರಿದ ಹಸುಗೂಸು ಗೌರಿ. ಮನೆ ಮಗಳಾಗಿ ನಮ್ಮ ಜೊತೆ ಜೀವ ಭಾಗವಾದಳು. ಹಸುವಿನ ಹಾಲು ಕುಡಿದು ದನಕರುಗಳ ಜೊತೆ ಸೊಪ್ಪಿನ ಬೆಟ್ಟದ ಹುಲ್ಲು ತಿನ್ನುತ್ತ ಬೆಳೆದಳು. ರಾತ್ರಿ ದೊಡ್ಡಿಯಲ್ಲಿ ಠಿಕಾಣಿ. ಬೆಳಿಗ್ಗೆ ಉಪಹಾರಕ್ಕೆ ದೋಸೆ ತಯಾರಿಯ ಹೊತ್ತಿಗೆ ಗಡಿಬಿಡಿಯಲ್ಲಿ ಅಡುಗೆ ಮನೆ ಸೇರಿ ಮಗುವಿನಂತೆ ಜಿಗಿಯುತ್ತ, ಆಡುತ್ತ ನಲಿದು ಬೆಳೆದವಳು.

## ಕಾಡಿನ ಸೂಕ್ಷ್ಮ ಸಂಬಂಧ

ಗೌರಿ ದೋಸೆ ತಿಂದಳೆ? ಗೌರಿಗೆ ಆರಾಮಿಲ್ಲವೇ? ಗೌರಿ ಬೆಟ್ಟಕ್ಕೆ ಹೋದಳಾ? ನಮ್ಮ ಮನೆ ಮಂದಿ ಮಾತಾಡುತ್ತಿದ್ದೆವು. ಗೌರಿಯೆಂದರೆ ಶಾಲೆಗೆ ಹೋಗುವ ಹುಡುಗಿಯಿರಬಹುದೆಂದು ಮನೆಗೆ ಬಂದವರು ಊಹಿಸುತ್ತಿದ್ದರು. ಹಿತ್ತಲಿನ ಸವತೆ ಬಳ್ಳಿ ತಿಂದು, ಜಗುಲಿಯ ದಾಣಿ ಚೀಲಕ್ಕೆ ಬಾಯಿ ಹಾಕಿ, ಅಡುಗೆ ಒಲೆಯ ಮೇಲೆ ಮುಚ್ಚಿಟ್ಟ ಬೆಳಗಿನ ದೋಸೆಗಳನ್ನೆಲ್ಲ ಲಪಟಾಯಿಸಿ ಕಾಡಿಗೆ ಕಾಲ್ಕೀಳುವ ಕಿಲಾಡಿತನ ನಿತ್ಯ ವಾರ್ತೆಗಳು. ಟಿ. ವಿ ನೋಡುತ್ತ ಕುಳಿತರೆ ಮಗ್ಗುಲಿಗೆ ಬಂದು ಮಲಗುವ ಪೋರಿ ಅತ್ತಿಗೆ ಅಡುಗೆ ತಯಾರಿಗೆ ಹೋದರೆ ಸರಪರ ಓಡಾಡುತ್ತ ಒಗ್ಗರಣೆ ಹಾಕುವಂತೆ ಪೋಸು ನೀಡುವವಳು. ಪುಟಾಣಿ ಮರಿಯಿದ್ದಾಗ ನಾಯಿಗಳ ಕೂಗು ಕೇಳಿದರೆ ನಡುಗುತ್ತಿದ್ದವಳು ಬರಬರುತ್ತ ನಾಯಿಗಳಿಗೆ ಹಿಂಗಾಲಿನಲ್ಲಿ ಒದ್ದು ಭಯಂಕರ ಹೊಡೆತ ಹಾಕುವ ಪಟ್ಟು ಕಲಿತಳು. ಹೊಡೆತ ತಿಂದ ನಾಯಿಗಳು ಗೌರಿಯ ಉಸಾಬರಿಗೆ ಬರುತ್ತಿರಲಿಲ್ಲ.

ನಮ್ಮ ಮನೆಯ ಗೋಡೆಯ ಸಂಧಿನಲ್ಲಿ ಒಂದು ಪುಟ್ಟ ಹಣಿಗೆಯಿದೆ. ದಿನಕ್ಕೊಮ್ಮೆ ಮನೆ ಮಗಳಂತೆ ಗೌರಿಯ ಮೈ ಬಾಚುವುದು ನಮ್ಮ ಕೆಲಸ. ಗಡಿಬಿಡಿಯಲ್ಲಿ ಬೇಗ ಬೇಗ ಬಾಚಿದರೆ ಕೈ ಕಚ್ಚಿ ಎಚ್ಚರಿಸುವ ಚಾಲಾಕಿ. ಹಣೆ, ಕಿವಿ, ಕುತ್ತಿಗೆಯನ್ನು ಹಣಿಗೆಯಲ್ಲಿ ಕೆರೆಯುತ್ತ ನಿಂತರೆ ಲೋಕ ಮರೆಯುವ ಧ್ಯಾನ. ಇಷ್ಟೆಲ್ಲ ಸೇವೆ ಮಾಡ್ತೇವೆ, ಒಂದಿಷ್ಟು ಹಾಲು ಕೊಡೆಂದು ಕೆಚ್ಚಲಿಗೆ ಕೈ ಹಾಕಿದರೆ ಜಿಗಿದು ಕಾಡಿಗೆ ಪರಾರಿ. ಕಾಡು ಸುತ್ತುತ್ತ, ತೋಟ ಓಡಾಡುತ್ತ, ಅಂಗಳದಲ್ಲಿ ಆಟವಾಡುತ್ತ ಬೆಳೆದ ಗೌರಿ ಒಂಭತ್ತು ವರ್ಷದ ನಂತರ ಕಾಡಿನ ಜಿಂಕೆಗಳ ದೋಸ್ತಿ ಸಂಪಾದಿಸಿ ಸಂಬಂಧದ ಸಾಕ್ಷಿ ತಂದಳು. ಮರಿಗೆ ಜನ್ಮ ನೀಡಿ ತವರಿಗೆ ಕರೆತಂದಂತೆ ಅಂಗಳಕ್ಕೆ ತಂದು ನಿಲ್ಲಿಸಿದಾಗ ಅಚ್ಚರಿ.



ಹಾವು ಕಡಿತಕ್ಕೆ ಅಸುನೀಗಿದ ಗೌರಿ

ನಂತರದ ದಿನಗಳಲ್ಲಿ ಮಗಳು ಚುಕ್ಕಿಯ ಜೊತೆ ಕಾಡು, ನಾಡು ಸುತ್ತಾಡುತ್ತ ನಲಿದಳು. ಆರೆಂಟು ತಿಂಗಳಿಗೊಂದು ಮರಿ ಜನನ. ಚುಕ್ಕಿ, ಗಣೇಶ, ಲಕ್ಷ್ಮಿಯೆಂದು ಗೌರಿ ಮರಿಗಳಿಗೆ ನಮ್ಮಿಂದ ನಾಮಕರಣ. ಕಾಡಿನ ಜಿಂಕೆಗಳೆಲ್ಲ ಮನೆಯಂಗಳಕ್ಕೆ ಬಂದು ನಿಲ್ಲಲು ಗೌರಿಯೇ ಮಾರ್ಗದರ್ಶಕಿಯಾದಳು. ಕಾಡಿನ ಇತರೆ ಜಿಂಕೆ ಮರಿಗಳನ್ನು ಸಾಕುವ ಜವಾಬ್ದಾರಿ ಹೊತ್ತಂತೆ ಮರಿಗಳ ತಂಡ ತಂದು ಅಂಗಳದಲ್ಲಿ ಮಲಗಿಸುವಷ್ಟು ಸಲಿಗೆ ಬೆಳೆಯಿತು.

ಗೌರಿ ಮನೆಯಂಗಳ ಅಡ್ಡಾಡಿ ಮನುಷ್ಯರ ಜೊತೆ ಒಡನಾಡುವಾಗ ನಮಗೇಕೆ ಅಂಜಿಕೆಯೆಂಬ ಪ್ರಶ್ನೆ ಕಾಡಿನ ಜಿಂಕೆಗಳಿಗೂ ಹುಟ್ಟಿರಬಹುದು. ಗಾಯಗೊಂಡ ಪುಟಾಣಿಯನ್ನು ಬದುಕಿಸಿ ನಾವು ಮರಳಿ ಕಾಡಿಗೆ ಅರ್ಪಿಸಿದರೆ ಗೌರಿ ಕಾಡಿನ ಗರ್ಭದಿಂದ ನವಿರಾದ ದಾರ ಎಳೆದು ನಮ್ಮ ಮನದಂಗಳಕ್ಕೆ ಜೋಡಿಸಿದಳು. ಒಂದು ಜಿಂಕೆ ಕಟ್ಟಿದ ವಿಶ್ವಾಸ ಕಾಡಿನ ಬಳಗಕ್ಕೆಲ್ಲ ದೊಡ್ಡ ಸಂದೇಶವಾಗಿ ಎಲ್ಲರೂ ಕುಟುಂಬದ ಗೆಳೆಯರಾಗಿ ಪರಿವರ್ತನೆಯಾದರು. ಜಿಂಕೆ ಬೇಟೆಯಾಡುವವರು ಗೌರಿಯ ಕತೆ ಕೇಳಿ ಬಂದೂಕು ಬದಿಗಿಟ್ಟಿದ್ದು ಕುಲದ ಅಭಿವೃದ್ಧಿಗೆ ಕೊಡುಗೆಯಾದರು. ಗೌರಿಯ ಒಂಭತ್ತು ಮಕ್ಕಳು, ಮರಿಮಕ್ಕಳ ಜೊತೆ 25– 30 ಜಿಂಕೆಗಳು ನಮ್ಮೂರ ಕಾಡಿನಲ್ಲಿ 8 ವರ್ಷಗಳೀಚೆ ಬೆಳೆದು ನಿಲ್ಲುವಲ್ಲಿ ಜನರ ಮನಸ್ಸು ಬದಲಿಸಿದ ಗೌರಿಯ ಕೊಡುಗೆಯಿದೆ.

ಒಮ್ಮೆ ಮನೆ ಬಾಗಿಲು ತೆರೆದಿತ್ತು, ಜಗುಲಿಯಲ್ಲಿ ಯಾರೂ ಇರಲಿಲ್ಲ. ತೋಟದತ್ತ ಹೋಗಿದ್ದ ನಾನು ಜಗುಲಿಗೆ ಬಂದರೆ ಕಾಡು ನೆಂಟರೆಲ್ಲ ಸೋಪಾ